ಇ) ಈ ಯೋಜನೆಯ ಲಾಭಪಡೆದ ರೈತರ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು)?

ಈ ಯೋಜನೆಯ ಲಾಭ ಪಡೆದ ಫಲಾನುಭವಿಗಳ ಸಂಖ್ಯೆ ಕೆಳಕಂಡಂತಿದೆ:

No. of Beneficiaries are furnished below:

ಕ್ರ.ಸ.	ತಾಲ್ಲೂಕು	ಫಲಾನುಭವಿಗಳ ಸಂಖ್ಯೆ
1	ಮಂಗಳೂರು	368
2	ಬಂಟ್ವಾಳ	245
3	ಬೆಳ್ತಂಗಡಿ	55
4	ಪುತ್ತೂರು	57
5	ಸುಳ್ಯ	74
	ಒಟ್ಟು	799

ಕೃತೋಇ/50/ಕೃಉಇ/2009

ಕೃಷಿ ಸಚಿವರು

ಕರ್ನಾಟಕ ವಿಧಾನ ಸಭೆ

389 ಶ್ರೀ ದೃವನಾರಾಯಣ.ಆರ್,(ಕೊಳ್ಳೆಗಾಲ)

ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವರು

ಅ) ಮೇ, 2008 ರಲ್ಲಿ ಮುಕ್ತ ಮಾರುಕಟ್ಟೆಯಲ್ಲಿ ಅತ್ಯುತ್ತಮ ಸೋನಾ ಮಸೂರಿ ಅಕ್ಕಿಗೆ ಒಂದು ಕಿಲೋಗೆ ಇದ್ದ ಗರಿಷ್ಟ ಬೆಲೆ ಎಷ್ಟು?

ಮೇ, 2008 ರಲ್ಲಿ ಮುಕ್ತ ಮಾರುಕಟ್ಟೆಯಲ್ಲಿ ಅತ್ಯುತ್ತಮ ಸೋನಾ ಮಸೂರಿ ಅಕ್ಕಿ ಒಂದು ಕಿಲೋಗೆ ಗರಿಷ್ಟ ಚಿಲ್ಲರೆ ಬೆಲೆ ರೂ.25/– ಆಗಿತ್ತು.

ಆ) ಜನವರಿ 2009ರಲ್ಲಿ ಅದೇ ಅತ್ಯುತ್ತಮ ಸೋನಾ ಮಸೂರಿ ಅಕ್ಕಿಗೆ ಒಂದು ಕಿಲೋಗೆ ಇದ್ದ ಗರಿಷ್ಟ ಬೆಲೆ ಎಷ್ಟು?

ಜನವರಿ 2009ರಲ್ಲಿ ಅದೇ ಅತ್ಯುತ್ತಮ ಸೋನಾ ಮಸೂರಿ ಅಕ್ಕಿಗೆ ಕಿಲೋಗೆ ಗರಿಷ್ಟ ಚಿಲ್ಲರೆ ಬೆಲೆ ರೂ.41/– ಆಗಿರುತ್ತದೆ.

ಇ) ಮೇ 2008 ಮತ್ತು ಜನವರಿ 2009 ರ ನಡುವೆ ಈ ಅಕ್ಕಿಯ ಜಿಲ್ಲೆಯಲ್ಲಾದ ವ್ಯತ್ಯಾಸ ಎಷ್ಟು? ಈ ವ್ಯತ್ಯಾಸದ ಶೇಕಡಾ ಪ್ರಮಾಣ ಎಷ್ಟು?

ಮೇ 2008 ಮತ್ತು ಜನವರಿ 2009 ರ ನಡುವೆ ಈ ಅಕ್ಕಿಯ ಬೆಲೆಯಲ್ಲಾದ ವ್ಯತ್ಯಾಸ ರೂ.16/– ಈ ವ್ಯತ್ಯಾಸದ ಪ್ರಮಾಣ ಶೇಕಡಾ 64ರಷ್ಟು.

ಈ) ಅಕ್ಕಿ ಬೆಲೆಯನ್ನು ನಿಯಂತ್ರಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

2005–06 ರಿಂದ 2008–09 ರವರೆಗೆ ಕರ್ನಾಟಕ ರಾಜ್ಯದಲ್ಲಿ ಅಕ್ಕಿಯ ಉತ್ಪಾದನೆ ವಿವರಗಳು ಈ ಕೆಳಕಂಡಂತಿರುತ್ತವೆ. (ಕೃಷಿ ಇಲಾಖೆಯ ವರದಿಯಂತೆ).

ಕ್ರಮ ಸಂಖ್ಯೆ	ವರ್ಷ	ವಿಸ್ತೀರ್ಣ (ಲಕ್ಷ ಹೆಕ್ಟೇರ್‌ಗಳಲ್ಲಿ)	ಉತ್ಪಾದನೆ (ಲಕ್ಷ ಟನ್‌ಗಳಲ್ಲಿ)	ಇಳುವರಿ (ಒಂದು ಹೆಕ್ಟೇರ್‌ಗೆ ಕೆ.ಜಿ.ಯಂತೆ)
1	2005–06	14.85	39.99	2834
2	2006–07	13.95	34.46	2600

4) ರಾಜ್ಯಾದ್ಯಂತ ಲೆವಿ ಅಕ್ಕಿಯನ್ನು ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಸಾಮಾನ್ಯ ಶ್ರೇಣಿಯ ಭತ್ತ ಪ್ರತಿ ಕ್ವಿಂಟಾಲ್‌ಗೆ ರೂ.900/– ರಂತೆ ಹಾಗೂ ಎ ಶ್ರೇಣಿಯ ಭತ್ತಕ್ಕೆ ರೂ.930/– ರಂತೆ ಸಂಗ್ರಹಿಸಲು ಸಂಗ್ರಹಣಾ ಕೇಂದ್ರಗಳನ್ನು ತೆರೆಯಲಾಗಿದ್ದು ದಿನಾಂಕ:20–2–2009 ರವರೆಗೆ 85000 ಮೆ.ಟನ್.ಗಳ ಅಕ್ಕಿಯನ್ನು ಲೆವಿ ರೂಪದಲ್ಲಿ ಸಂಗ್ರಹಿಸಲಾಗಿದೆ.

5) ಅಕ್ಕಿಯ ಅಂತರ್‌ರಾಜ್ಯ ಸಾಗಾಣಿಕೆಯನ್ನು ನಿರ್ಬಂಧಿಸಲಾಗಿದೆ.

<u>ಅಕ್ಕಿಯ ಬೆಲೆಯ ಹೆಚ್ಚಳಕ್ಕೆ ಪ್ರಮುಖ ಕಾರಣಗಳು:–</u>

(I) ಅಕ್ಕಿ ಉತ್ಪಾದನೆಯಲ್ಲಿ ಇಳಿಮುಖ.

(II) ಆರ್ಥಿಕ ಹಿಂಜರಿತ.

ಆನಾಸ. 44 ಡಿಆರ್.ಎ 2009.

(ಹೆಚ್. ಹಾಲಪ್ಪ)
ಆಹಾರ ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಸಚಿವರು.

<u>ಕರ್ನಾಟಕ ವಿಧಾನ ಸಭೆ</u>

390 ಶ್ರೀ ಆರ್.ಧ್ರುವನಾರಾಯಣ

ಅ) ಸಹಕಾರ ಇಲಾಖೆಯ ನಿಬಂಧನೆಗಳಿಗೊಳಪಟ್ಟು ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಘಗಳ ಸಂಖ್ಯೆ ಎಷ್ಟು?

ರಾಜ್ಯದಲ್ಲಿ 28,645 ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿವೆ.

ಆ) ಈ ಸಹಕಾರ ಸಂಘಗಳ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಹಿಂದುಳಿದ ವರ್ಗಗಳು ಹಾಗೂ ಮಹಿಳೆಯರಿಗೆ ಮೀಸಲಾತಿ ಸೌಲಭ್ಯವನ್ನು ಕಲ್ಪಿಸಲಾಗಿದೆಯೇ?

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 28ಎ(3) ಪ್ರಕಾರ ಆಡಳಿತ ಮಂಡಳಿಯಲ್ಲಿ ಒಂದು ಸ್ಥಾನವನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಕ್ಕೆ